ಸಿ.ಸಿ. ನಂಬ್ರಃ 1864/2019 ಪ್ರಾಸಾಃ1

ದಿನಾಂಕಃ 20.03.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನನ್ನ ತಮ್ಮನ ಹೆಂಡತಿ ಮಮತಾ ಜುಟ್ಟು ಹಿಡಿದು ನೆಲಕ್ಕೆ ಕೆಡವಿ ಹಲ್ಲೆ ಮಾಡಿರುತ್ತಾರೆ. ದಿಃ 04-01-2019 ರಲ್ಲಿ ನಾನು ಈ ಘಟನೆಯ ವಿಚಾರವಾಗಿ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಪ್ರಸನ್ನ, ಆತನ ಹೆಂಡತಿ ಮಮತಾ, ಜಯನಂದ ಖಾರ್ವಿರವರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವೈ ಎಸ್ ಎಸ್ ರವರಿಂದಃ**

ಪ್ರಸನ್ನರವರು ಚೂರಿಯಿಂದ ಎಡಕೈ ಭಾಗಕ್ಕೆ ತಿವಿದಿರುತ್ತಾರೆ. ಅದು ತೆರೆದ ಗಾಯವಾಗಿದ್ದು ಹೊಲಿಗೆ ಹಾಕಿರುತ್ತಾರೆ. ಆ ಚಿಕಿತ್ಸೆಯನ್ನು ಕುಂದಾಪುರದ ಸರಕಾರಿ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ. ಅದಕ್ಕೂ ಮೊದಲು ಎನ್ ಆರ್ ಆಚಾರ್ಯ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ಪ್ರಥಮ ಚಿಕಿತ್ಸೆ ನೀಡಿ ಅಲ್ಲಿ ಮುಂದಿನ ಚಿಕಿತ್ತೆ ನೀಡಲಾಗುವುದಿಲ್ಲ ಎಂದು ಹೇಳಿ ಕಳುಹಿಸಿರುತ್ತಾರೆ. ಜಯನಂದಾರವರು ಭುಜ, ಬೆನ್ನು , ತಲೆಗೆ ಹೊಡೆದಿರುತ್ತಾರೆ. ಅದರಿಂದ ಸದ್ರಿ ಭಾಗಗಳಲ್ಲಿ ತರುಚಿದ ಗಾಯಗಳು ಆಗಿದ್ದವು. ಬೆನ್ನಿಗೆ, ಎಡಕೈ ಮತ್ತು ಭುಜಕ್ಕೆ ಗುದ್ದಿದಾಗ ಆಗುವ ಏಟು ಸದ್ರಿ ಭಾಗಗಳಿಗೆ ಆಗಿರುತ್ತದೆ. ಜುಟ್ಟು ಹಿಡಿದು ನೆಲಕ್ಕೆ ದೂಡಿದಾಗ ಎಡಭಾಗದ ನೆಲಕ್ಕೆ ಬಿದ್ದಿರುತ್ತೇನೆ. ಆಗ ಎಡಕಾಲು ಮತ್ತು ಭುಜಕ್ಕೆ ತರುಚಿದ ಗಾಯಗಳು ಆಗಿರುತ್ತವೆ.

ವೈದ್ಯರ ಬಳಿ ಮೇಲೆ ತಿಳಿಸಿದ ಗಾಯಗಳನ್ನು ತೋರಿಸಿರುತ್ತೇನೆ. ಅದಕ್ಕೆಲ್ಲಾ ಚಿಕಿತ್ಸೆ ಪಡೆದಿರುತ್ತೇನೆ. ಮೇಲೆ ಹೇಳಿದ ರೀತಿಯ ಯಾವುದೇ ಗಾಯಗಳು ಆಗಿಲ್ಲದೇ ನಾನೇ ಸ್ವತಹ ಗೀರಿಕೊಂಡು ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಹಾಜರಾಗಿ ಸುಳ್ಳು ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಎನ್ ಆರ್ ಆಚಾರ್ಯ ಆಸ್ಪತ್ರೆಯಲ್ಲಿ ಮೇಲೆ ಹೇಳಿದ ಗಾಯಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಇಲ್ಲ ಎಂಬುವುದು ಸುಳ್ಳು ಎಂದರೆ ನನಗೆ ತಿಳಿದಿಲ್ಲ. ಅವರು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಲು ಒಪ್ಪದ ಕಾರಣ ಸರಕಾರಿ ಆಸ್ಪತ್ರೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ.

ಸದ್ರಿ ದಿನ ಆದ ಹಲ್ಲೆಯಿಂದ ರಕ್ತ ಸ್ರಾವವಾಗಿರುತ್ತದೆ. ಘಟನಾ ಸ್ಥಳದಲ್ಲಿ ರಕ್ತ ಬಿದ್ದಿತ್ತು. ಅದನ್ನು ಪಂಚನಾಮೆಯಲ್ಲಿ ಕಾಣಿಸಿರುವ ಬಗ್ಗೆ ನನಗೆ ತಿಳಿದಿಲ್ಲ. ಚಾಸಾ-2 ನನ್ನ ಗಂಡ. ಆತ ಪಂಚನಾಮೆಯಲ್ಲಿ ರಕ್ತದ ಕಲೆಯ ಬಗ್ಗೆ ವಿವರಿಸಿರುವುದನ್ನು ತಿಳಿಸಿಲ್ಲ. ಚೂರಿಯಲ್ಲಿ ರಕ್ತ ತಾಗಿತ್ತು ಆದರೆ ಪ್ರಮಾಣ ಎಷ್ಟು ಎಂದು ನನಗೆ ಮಾಹಿತಿ ಇಲ್ಲ. ನನ್ನ ಬಟ್ಟೆಗೆ ತಾಗಿತ್ತಾ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನನ್ನ ಯಾವೆಲ್ಲಾ ಅಂಗಗಳಿಗೆ ಪೆಟ್ಟಾಗಿರುವ ವಿಚಾರವನ್ನು ನ್ಯಾಯಾಧೀಶರ ಮುಂದೆ ಹೇಳಿರುವುದಿಲ್ಲ. ಯಾವೆಲ್ಲಾ ದೇಹದ ಭಾಗಗಳಿಗೆ ಯಾರು ಯಾರು ಹಲ್ಲೆ ಮಾಡಿದ್ದಾರೆ ಎಂಬ ವಿಚಾರವನ್ನು ನ್ಯಾಯಾಧೀಶರಿಗೆ ಹೇಳಿರುತ್ತೇನೆ.

ಮೇಲೆ ಹೇಳಿದ ಹಲ್ಲೆಯಾಗಿರದ ಕಾರಣ ಪೊಲೀಸರು ಅಥವಾ ನ್ಯಾಯಾಧೀಶರ ಮುಂದೆ ಅದರ ವಿವರಣೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಯಾರು ಯಾರಿಂದ ಎಷ್ಟು ಗಂಟೆಗೆ ಹಲ್ಲೆಯಾಗಿದೆ ಎಂದು ವಿವರಗಳನ್ನು ನೀಡಿರುತ್ತೇನೆ. ನನಗೆ ಆಗಿರುವ ಎಲ್ಲಾ ಪೆಟ್ಟುಗಳ ವಿವರಗಳನ್ನು ವೈದ್ಯರಿಗೆ ನೀಡಿರುತ್ತೇನೆ. ಅಂತಹ ಯಾವುದೇ ವಿಚಾರವನ್ನು ವೈದ್ಯರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ.

ಗಲಾಟೆಯು ಮಧ್ಯಾಹ್ನ 3 ರಿಂದ 3-30ರ ಸಮಯದಲ್ಲಿ ಆಗಿರುತ್ತದೆ. ಅದಾಗಿ ಅರ್ಧಗಂಟೆಗೆ ಎನ್ ಆರ್ ಆಚಾರ್ಯ ಆಸ್ಪತ್ರೆಗೆ ಹೋಗಿರುತ್ತೇನೆ. ಎನ್ ಆರ್ ಆಚಾರ್ಯ ಆಸ್ಪತ್ರೆಯಲ್ಲಿ ಅರ್ಧ ಗಂಟೆ ಇದ್ದೇವು. ಅಲ್ಲಿಂದ ಕುಂದಾಪುರ ಆಸ್ಪತ್ರೆಗೆ 4-30 ರಿಂದ 5ರ ವೇಳೆಗೆ ಬಂದಿರಬಹುದು. ವೈದ್ಯರು ಬಂದ ಸ್ವಲ್ಪ ಹೊತ್ತಿಗೆ ಪ ರಿಶೀಲಿಸಿರುತ್ತಾರೆ.

ಚಾಸಾ-3 ನನ್ನ ಮಗ. ಚಾಸಾ-4 ನನ್ನ ಮೈದುನ. ಚಾಸಾ-5 ನನ್ನ ಗಂಡನ ಸಂಬಂಧಿ. ನಮ್ಮ ಮನೆಯ ಪಕ್ಕದಲ್ಲಿ ಶಿವರಾಮ ಶೆಟ್ಟಿ ಮತ್ತೆರಡು ಮನೆಗಳು ಇವೆ ಅವರ ಹೆಸರು ನನಗೆ ನೆನಪಿಲ್ಲ. ಘಟನೆಯನ್ನು ಬೇರೆ ಯಾರು ನೋಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾವುದೇ ಗಲಾಟೆ ಸಂಭವಿಸದೆ ಇದ್ದ ಕಾರಣ ನಮ್ಮ ಮನೆಯವರನ್ನು ಸಾಕ್ಷಿದಾರರನ್ನಾಗಿ ಕಾಣಿಸಿದ್ದೇವೆ ಎಂದರೆ ಸಾಕ್ಷಿಯು ಆ ದಿನ ನಮ್ಮ ಮನೆಯಲ್ಲಿ ರಾಜಿ ಪಂಚಾಯಿತಿ ಇದ್ದು ಎಲ್ಲರೂ ಹೋದ ನಂತರ ಗಲಾಟೆಯಾಗಿರುವುದಾಗಿ ನುಡಿಯುತ್ತಾರೆ. ರಾಜಿ ಪಂಚಾಯಿತಿಗೆ ಸುಮಾರು 6-7 ಜನರು ಇದ್ದರು. ಸದ್ರಿ ರಾಜಿ ಪಂಚಾಯಿತಿಗೆ ಅವರೆಲ್ಲ ಇದ್ದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲು ಯಾವುದೇ ತೊಂದರೆ ಇರಲಿಲ್ಲ. ಸದ್ರಿ ರಾಜಿ ಪಂಚಾಯಿತಿಗೆ ಬಂದಿದ್ದ ವ್ಯಕ್ತಿಗಳ ಬಗ್ಗೆ ಯಾವುದೇ ವಿವರನ್ನು ಪೊಲೀಸರಿಗೆ ಅಥವಾ ನ್ಯಾಯಾಲಯಕ್ಕೆ ತಿಳಿಸಿಲ್ಲ. ಸದ್ರಿ ದಿನ ನಮ್ಮ ಮನೆಯಲ್ಲಿ ರಾಜಿ ಪಂಚಾಯಿತಿಯೇ ನಡೆದಿಲ್ಲ ಎಂದರೆ ಸರಿಯಲ್ಲ. ಸದ್ರಿ

ಪಂಚಾಯಿತಿಗೆ ಬಂದಿದ್ದ ಪಕ್ಷದಲ್ಲಿ ಅವರ ವಿವರಗಳನ್ನು ನೀಡುತ್ತಿದ್ದೀರಿ ಎಂದರೆ ಸಾಕ್ಷಿ ಗಲಾಟೆ ವೇಳೆಗೆ ಅವರು ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ಚಾಸಾ-2 ರವರ ವಿರುದ್ದ ಇದೇ ನ್ಯಾಯಾಲಯದಲ್ಲಿ ಸಿಸಿ 3002/2019 ರ ಪ್ರಕರಣ ಬಾಕಿ ಇದೆ ಎಂದರೆ ಸರಿ. ಆ ಕೇಸಿನಲ್ಲಿ 1ನೇ ಆರೋಪಿಗೆ ನಾನು, ಚಾಸಾ-2 ಮತ್ತು 4 ರವರು ಸೇರಿ ಹಲ್ಲೆ ಮಾಡಿರುವುದಾಗಿ ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಆಸ್ತಿಗೆ ಸಂಬಂಧಿಸಿದ ನಮ್ಮ ನಡುವೆ ಆದ ತಕರಾರಿಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳನ್ನು ಪೊಲೀಸರಿಗೆ ಹಾಜರುಪಡಿಸಿಲ್ಲ. ಘಟನೆಯ ವೇಳೆಗೆ ತಿವಿಯಲು ಉಪಯೋಗಿಸಿದ ಚೂರಿಯನ್ನು ಪ್ರಸನ್ನರವರು ತೆಗೆದುಕೊಂಡು ಹೋಗಿರುತ್ತಾರೆ. ಅದೇ ಚೂರಿ ಎಂದು ಹೇಳಲು ಮುಮಾ4 ರಲ್ಲಿ ಯಾವುದೇ ಗುರುತು ಇಲ್ಲ ಎಂದರೆ ಸಾಕ್ಷಿ ಅದರಲ್ಲಿರುವ ಚೂಪನ್ನು ನೋಡಿ ಗುರುತಿಸಬಹುದು ಎಂದು ನುಡಿಯುತ್ತಾರೆ. ಅಂತಹ ಚೂರಿ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ನನಗೆ ಹೇಳಲಾಗುವುದಿಲ್ಲ. ಪೊಲೀಸರಿಗೆ ಒಂದು ಚೂರಿಯನ್ನು ಕೊಟ್ಟು ಪ್ರಕರಣದಲ್ಲಿ ಅಳವಡಿಸುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮುಮಾ4 ರಲ್ಲಿರುವ ಹಿಡಿ ಹೇಗೆ ಇತ್ತು ಎಂದು ಪೊಲೀಸರು ಗುರುತಿಸಿರುವ ಬಗ್ಗೆ ನಾನು ಹಾಜರು ಇಲ್ಲದ ಕಾರಣ ನೋಡಿರುವುದಿಲ್ಲ. ಆದರೆ ಚೂರಿಯನ್ನು ನೋಡಿರುತ್ತೇನೆ. ಘಟನೆಯ ವೇಳೆಗೆ ಅದರ ಹಿಡಿ ಚೆನ್ನಾಗಿತ್ತು. ನ್ಯಾಯಾಲಯದ ಮುಂದೆ ಇರುವ ಚೂರಿಯ ಹಿಡಿ ಚೆನ್ನಾಗಿಲ್ಲ ಎಂದರೆ ಸಾಕ್ಷಿ ಸಾಧರಣ 7-8 ವರ್ಷಗಳಾಗಿರುತ್ತದೆ ಎಂದು ನುಡಿಯುತ್ತಾರೆ. ಚೂರಿಯ ಹಿಡಿಯನ್ನು ನಾನು ನಿಖರವಾಗಿ ಗಮನಿಸಿರುವುದಿಲ್ಲ. ಸದ್ರಿ ದಿನ ಮುಮಾ4 ನ್ನು ಆರೋಪಿತರು ಕೃತ್ಯಕ್ಕಾಗಿ ಬಳಸಿಲ್ಲ ಎಂದರೆ ಸರಿಯಲ್ಲ. ಮುಮಾ4ರಲ್ಲಿ ಕಂಡು ಬರುವ ಕಲೆ ಘಟನೆ ದಿನ ಇತ್ತಾ ಎಂದು ನನಗೆ ಹೇಳಲಾಗುವುದಿಲ್ಲ.

ಮುಮಾ1 ರಾಡಿನಿಂದ ಹಲ್ಲೆ ಮಾಡಿರುತ್ತಾರೆ. ಅದನ್ನು ಗುರುತಿಸಲು ಯಾವುದೇ ವಿಶೇಷ ಚಹರೆ ಗಮನಿಸಿಲ್ಲ. ಇಂತಹ ರಾಡ್ ಎಲ್ಲಾ ಕಡೆ ಸಿಗುತ್ತದೆ ಎಂದರೆ ಇರಬಹುದು. ಮುಮಾ1 ರಿಂದ ಯಾವುದೇ ಹಲ್ಲೆಯಾಗಿಲ್ಲ ಎಂದರೆ ಸರಿಯಲ್ಲ. ಅದನ್ನು ಚಾಸಾ-2 ರವರು ಸೃಷ್ಟಿಸಿ ಪೊಲೀಸರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಬಲಕೈಯಲ್ಲಿ ಹಿಡಿದು ಹೊಡೆದಿರುತ್ತಾರೆ. ಕಟ್ಟಡ ನಿರ್ಮಿಸುತ್ತಿದ್ದ ಸ್ಥಳದಲ್ಲಿ ಇದ್ದ ಬೇರೆ ರಾಡುಗಳ ರಾಶಿಯಲ್ಲಿ ಎಸೆದು ಹೋಗಿರುತ್ತಾರೆ. ಮುಮಾ1ನ್ನು ಕೃತ್ಯಕ್ಕೆ ಬಳಸಿಲ್ಲ ಎಂದರೆ ಸರಿಯಲ್ಲ.

ಮುಮಾ2 ಮತ್ತು 3 ನನಗೆ ಸಂಬಂಧಿಸಿದ ಬಟ್ಟೆ ಅಲ್ಲ ಎಂದರೆ ಸರಿಯಲ್ಲ. ಅದನ್ನು ಗಲಾಟೆ ವೇಳೆಗೆ ಬಳಸಲಾಗಿದೆ ಎಂದು ಸೃಷ್ಟಿಸಿ ಪೊಲೀಸರಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಆಸ್ಪತ್ರೆಯಲ್ಲಿ ಅದನ್ನು ನನ್ನಿಂದ ವಶಕ್ಕೆ ಪಡೆದಿರುತ್ತಾರೆ. ಆ ವೇಳೆಗೆ ಪೊಲೀಸರು ಏನು ದಾಖಲೆ ಮಾಡಿದ್ದಾರೆ ಎಂದು ನನಗೆ ತಿಳಿದಿಲ್ಲ. ಅಪಾದಿಸಿರುವ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಮ್ಮ ನಡುವೆ ಇರುವ ಸಿವಿಲ್ ಪ್ರಕರಣದ ತಕರಾರು ಇರುತ್ತದೆ ಎಂದರೆ ಸಾಕ್ಷಿ ಈ ಘಟನೆಯಾಗಿ ತುಂಬಾ ದಿನಗಳ ನಂತರ ರಾಜಿಯಾಗದ ಕಾರಣ ಸಿವಿಲ್ ಪ್ರಕರಣ ಹಾಕಿರುವುದಾಗಿ ನುಡಿಯುತ್ತಾರೆ.

ಆಸ್ತಿ ವಿಚಾರದಲ್ಲಿ ತಕರಾರು ಇತ್ತು ಎಂದರೆ ಸರಿ. ಅದೇ ದ್ವೇಷದಲ್ಲಿ ಸುಳ್ಳು ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ಆಸ್ಪತ್ರೆಗೆ ಬಂದಾಗ ದೂರನ್ನು ಬರೆದು ನೀಡಿರುತ್ತೇನೆ. ನಿಪಿ-1 ನ್ನು ಚಾಸಾ-2 ರವರು ಬರೆದಿರುತ್ತಾರೆ. ನಾನು ಮತ್ತು ಆತ ಒಟ್ಟಾಗಿ ಸೇರಿ ಒಂದು ಸುಳ್ಳು ಪ್ರಕರಣ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದ ಯಾವುದೇ ಅಪಾದಿತ ಘಟನೆ ಜರುಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ